## 7 ವಿನೋದ್, ಶಶಿ ನಿರ್ಗಮನ

ಬಾಲಿವುಡ್‌ನ ಇಬ್ಬರು ಮಹಾನ್ ನಾಯಕ ನಟರು ಈ ವರ್ಷ ಜೀವನರಂಗದಿಂದ ನಿರ್ಗಮಿಸಿದ್ದಾರೆ. ಶಶಿಕಪೂರ್ ಮತ್ತು ವಿನೋದ್ ಖನ್ನಾ ಇಬ್ಬರೂ ಬಾಲಿವುಡ್‌ನಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದು, ಹೀರೋಗಳಾಗಿ ಅತ್ಯಧಿಕ ಕಮರ್ಷಿಯಲ್ ಮಹತ್ವವನ್ನೂ ಹೊಂದಿದ್ದವರು. ಅವರಿಗೂ ಮುನ್ನ ಖಳನಟ ಮತ್ತು ಚರಿತ್ರನಟನಾಗಿ ಹೆಸರು ಮಾಡಿದ್ದ ಓಂ ಪುರಿ ಮತ್ತು ಪೋಷಕ ನಟಿಯಾಗಿ ಅಪಾರ ಜನಪ್ರಿಯತೆ ಗಳಿಸಿದ್ದ ರೀಮಾ ಲಾಗೂ ಅವರೂ ನಿರ್ಗಮಿಸಿದರು. ಈ ನಾಲ್ವರು ಪ್ರತಿಭಾವಂತರ ನಿರ್ಗಮನ ಬಾಲಿವುಡ್‌ನಲ್ಲಿ ಅಗಾಧ ವಿಷಾದವನ್ನು ಉಂಟು ಮಾಡಿತು.



70ರ ಇಳಿವಯಸ್ಸಿನಲ್ಲಿ ನಿಧನರಾದ ವಿನೋದ್ ಖನ್ನಾ, ವಿಲ್ಲನ್, ನಾಯಕನಟ, ಸನ್ಯಾಶಿ ಮತ್ತು ರಾಜಕಾರಣಿ– ಹೀಗೆ ನಾಲ್ಕು ವಿಭಿನ್ನ ಆಯಾಮಗಳಲ್ಲಿ ಬದುಕು ಸವೆಸಿದವರು. 1946ರಲ್ಲಿ (ಈಗಿನ ಪಾಕಿಸ್ತಾನದ) ಪೆಷಾವರದಲ್ಲಿ ಹುಟ್ಟಿ ಕುಟುಂಬದ ಜತೆಗೆ ಮುಂಬೈಗೆ ವಲಸೆ ಬಂದವರು. ಆರಂಭದಲ್ಲಿ ಹಿಂದಿ ಚಿತ್ರರಂಗದ ಯಶಸ್ವಿ ವಿಲ್ಲನ್ ಆದ ವಿನೋದ್ ಖನ್ನಾ ಬಳಿಕ ಮಲ್ಟಿಸ್ಟಾರರ್ ಸಿನಿಮಾಗಳಲ್ಲಿ ಎರಡನೇ ನಾಯಕನ ಪಾತ್ರಕ್ಕೆ ಹೆಸರುವಾಸಿಯಾದರು. 70ರ ದಶಕದಲ್ಲಿ ಅವರು ಒಟ್ಟು 47 ಮಲ್ಟಿಸ್ಟಾರರ್ ಸಿನಿಮಾಗಳಲ್ಲಿ ನಟಿಸಿದ್ದೇ ಒಂದು ದಾಖಲೆ. ಬಳಿಕ ಸ್ವತಂತ್ರ ನಾಯಕರಾಗಿ ಪೊಲೀಸ್ ಇನ್ಸ್‌ಪೆಕ್ಟರ್ ಪಾತ್ರಗಳಿಗೆ ಜೀವ ತುಂಬಿ ಯಶಸ್ವಿಯಾದವರು.

1975ರಲ್ಲಿ ಎಲ್ಲ ಆಸ್ತಿಗಳನ್ನೂ ತ್ಯಜಿಸಿ ಸನ್ಯಾಸತ್ವ ಸ್ವೀಕರಿಸಿದ ವಿನೋದ್ ಖನ್ನಾ, 80ರಲ್ಲಿ ಅಮೆರಿಕಕ್ಕೆ ತೆರಳಿ ಓಶೋ ರಜನೀಶ್ ಆಶ್ರಮದಲ್ಲಿ ಮಾಲಿಯ ಕೆಲಸ ಮಾಡಿಕೊಂಡು ನೆಮ್ಮದಿ ಕಂಡುಕೊಂಡರು. ಕೆಲವು ವರ್ಷಗಳ ಬಳಿಕ ಭಾರತಕ್ಕೆ ಮರಳಿದ ಅವರು ರಾಜಕೀಯಕ್ಕೆ ಇಳಿದದ್ದು ಬದುಕಿನ ಇನ್ನೊಂದು ತಿರುವು. 1997ರಲ್ಲಿ ಪಂಜಾಬಿನ ಗುರುದಾಸಪುರ ಕ್ಷೇತ್ರದಿಂದ ಸ್ಪರ್ಧಿಸಿ ಲೋಕಸಭೆಗೆ ಆಯ್ಕೆಯಾದರು. ಸತತ ನಾಲ್ಕು ಸಲ ಚುನಾವಣೆಗಳಲ್ಲಿ ಗೆದ್ದು ಕೊನೆಗೆ ಅಟಲ ಬಿಹಾರಿ ವಾಜಪೇಯಿ ಸಂಪುಟದಲ್ಲಿ ವಿದೇಶ ವ್ಯವಹಾರಗಳ ರಾಜ್ಯ ಸಚಿವರೂ ಆಗಿದ್ದರು.



ನಟ– ನಿರ್ಮಾಪಕ ಶಶಿಕಪೂರ್ 168 ಹಿಂದಿ ಸಿನಿಮಾಗಳಲ್ಲಿ ನಟಿಸಿದ್ದು, ಮಲ್ಟಿಸ್ಟಾರರ್ ಸಿನಿಮಾಗಳಲ್ಲಿ ಅನಿವಾರ್ಯ ಎರಡನೆಯ ನಾಯಕ ಎನ್ನಿಸಿಕೊಂಡಿದ್ದರು. ಈ ಇಬ್ಬರೂ ಅಮಿತಾಭ್ ಬಚ್ಚನ್ ಅವರಿಗೆ ಸರಿಜೋಡಿಯಾಗಿ ನಟಿಸಿದ್ದ ಹಲವಾರು ಚಿತ್ರಗಳು ಸೂಪರ್‌ಹಿಟ್ ಆದವು. ಹಿರಿಯ ನಟ ಪ್ರಥ್ವಿರಾಜ್ ಕಪೂರ್ ಅವರ ಕಿರಿಯ ಮಗ ಶಶಿಕಪೂರ್, ಹಲವು ಕಲಾತ್ಮಕ ಚಿತ್ರಗಳಲ್ಲೂ ನಟಿಸಿ, ನಿರ್ಮಿಸಿ ತಮ್ಮದೇ ಆದ ಛಾಪು ಮೂಡಿಸಿದ್ದರು, ಅಪ್ಪ ಕಟ್ಟಿದ ಮುಂಬೈಯ ಪ್ರಥ್ವಿರಾಜ್ ಥಿಯೇಟರ್ ನ ನಟ– ಮ್ಯಾನೇಜರ್ ಆಗಿ ಅವರು ರಂಗಭೂಮಿಗೆ ಕೊಟ್ಟಿರುವ ಕೊಡುಗೆಯೂ ಮಹತ್ವದ್ದು. ಚಿತ್ರರಂಗಕ್ಕೆ ನೀಡಿದ ಮಹತ್ವದ ಕೊಡುಗೆಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಮತ್ತು ಪದ್ಮಭೂಷಣ ಪ್ರಶಸ್ತಿಗಳೂ ಅವರನ್ನು ಅಲಂಕರಿಸಿದ್ದವು.

ತನ್ನ ಗಡಸು ಧ್ವನಿ ಮತ್ತು ಅಪೂರ್ವ ನಟನೆಯ ಮೂಲಕ ವಿಶಿಷ್ಟ ಸ್ಥಾನ ಪಡೆದಿದ್ದ ಓಂಪುರಿ, ಕನ್ನಡ ಸಿನಿಮಾರಂಗಕ್ಕೂ ಪರಿಚಿತರು. ಒಂದು ಕಾಲದಲ್ಲಿ ಬಾಲಿವುಡ್‌ನ ಹೊಸ ಅಲೆಯ ಚಿತ್ರಗಳ ಶಾಶ್ವತ ನಾಯಕ ನೆಂದು ಹೆಸರು ಗಳಿಸಿದವರು. ಎರಡು ಬಾರಿ ಅತ್ಯುತ್ತಮ ನಟನೆಗೆ ರಾಷ್ಟ್ರಪ್ರಶಸ್ತಿ ಗಳಿಸಿದ್ದು ಈ 'ಪದ್ಮಶ್ರೀ' ವಿಜೇತನ ಹೆಗ್ಗಳಿಕೆ.

## 8 ನಟ ದಿಲೀಪ್ ಬಂಧನ

ವರ್ಷದ ಆರಂಭದ ಫೆಬ್ರುವರಿ ತಿಂಗಳಲ್ಲಿ ಮಲಯಾಳಂ ಚಿತ್ರರಂಗದ ಪ್ರಮುಖ ನಾಯಕ ನಟಿ ಯೊಬ್ಬರನ್ನು ಅಪಹರಿಸಿ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದ ಮೇಲೆ ಮಲಯಾಳಂ ಚಿತ್ರರಂಗದ ಖ್ಯಾತ ನಟ ದಿಲೀಪ್ ಬಂಧನವಾದದ್ದು ಭಾರತೀಯ ಚಿತ್ರರಂಗದಲ್ಲೇ ಈ ವರ್ಷದ ಅತಿ ದೊಡ್ಡ ಸುದ್ದಿ ಎನ್ನಬಹುದು.



ಆರಂಭದಲ್ಲಿ ಪಲ್ಸರ್ ಸುನಿ ಎಂಬ ಕಾರು ಚಾಲಕ ಈ ಪ್ರಕರಣದಲ್ಲಿ ಸಿಕ್ಕುಬಿದ್ದ. ಆತ ಪೊಲೀಸ್ ಬಂಧನದಲ್ಲಿ ದಿಲೀಪ್ ಹೆಸರು ಹೇಳಿದ. 'ದಿಲೀಪ್ ಕುಮ್ಮಕ್ಕಿನಿಂದ ತಾನು ಈ ಕೆಲಸ ಮಾಡಿದೆ' ಎನ್ನುವುದು ಆತನ ತಪ್ಪೊಪ್ಪಿಗೆಯಾಗಿತ್ತು. ಅದರ ಬೆನ್ನಲ್ಲೇ ದಿಲೀಪ್ ಬಂಧನವಾಯಿತು. ಪಲ್ಸರ್ ಸುನಿಯ ಬಂಧನವಾದಾಗ ತನ್ನ ವಿರುದ್ಧ ಬಂದ ಆರೋಪಗಳನ್ನು ದಿಲೀಪ್ ತಳ್ಳಿ ಹಾಕಿದ್ದು ಮಲಯಾಳಂ ಚಿತ್ರರಂಗದ ಖ್ಯಾತ ನಟರು ದಿಲೀಪ್ ಬೆಂಬಲಕ್ಕೆ ನಿಂತಿದ್ದರು. ಆದರೆ ಪೊಲೀಸರು ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಪ್ರಕಟಿಸಿದ ಬಳಿಕ ಮಲಯಾಳಂ ಚಿತ್ರರಂಗದ ದಿಗ್ಗಜರು ಕಲಾವಿದರ ಸಂಘದ ಖಜಾಂಚಿ ಹುದ್ದೆಯಿಂದ ದಿಲೀಪ್ ರನ್ನು ವಜಾ ಮಾಡಿದರು. ಕೇರಳ ಚಿತ್ರರಂಗದಲ್ಲಿ ಈ ವರ್ಷ ಅತಿದೊಡ್ಡ ಕೋಲಾಹಲವನ್ನು ಉಂಟು ಮಾಡಿದ ಘಟನೆಯಿದು.

## 9 ಮಾನುಷಿ ಎಂಬ ಸುಂದರಿ

2017 ಭಾರತದ ಸುಂದರಿಯರ ಪಾಲಿಗೆ ಶುಭ ವರ್ಷ. ಆರನೇ ಬಾರಿಗೆ ಭಾರತದ ಪಾಲಿಗೆ ವಿಶ್ವಸುಂದರಿಯ ಪಟ್ಟ ಒಲಿದು ಬಂದ ವರ್ಷ. ಭಾರತದ ಹರಿಯಾಣದ ರೋಹ್ಟಕ್‌ನಲ್ಲಿರುವ ಮಾನುಷಿ ಚಿಲ್ಲಾರ್ ಈ ವರ್ಷ ವಿಶ್ವಸುಂದರಿ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ. 5 ಅಡಿ 9 ಇಂಚು ಎತ್ತರದ ಈ ಕಂದುವರ್ಣದ ಸುಂದರಿ ಈ ವರ್ಷದ ಆರಂಭದಲ್ಲಿ ಫೆಮಿನಾ ಮಿಸ್ ಇಂಡಿಯಾ ಪ್ರಶಸ್ತಿ ಗೆದ್ದು ವಿಶ್ವಮಟ್ಟದ ಸ್ಪರ್ಧೆಗೆ ಅರ್ಹತೆ ಗಳಿಸಿದ್ದರು. ಸೋನಿಪತ್‌ನಲ್ಲಿ ವೈದ್ಯಕೀಯ ಪದವಿ ವಿದ್ಯಾರ್ಥಿಯಾಗಿರುವ ಮಾನುಷಿ, ಬಹುಮುಖ ಪ್ರತಿಭಾವಂತೆ ಎನ್ನುವುದು ವಿಶೇಷ. ಭಾರತದ ಖ್ಯಾತ ನೃತ್ಯಗುರುಗಳಾದ ರಾಜಾ ರೆಡ್ಡಿ– ರಾಧಾ ರೆಡ್ಡಿ ಅವರಿಂದ ಕೂಚುಪುಡಿ ನೃತ್ಯ ಕಲಿತಿರುವ ಮಾನುಷಿ ಇನ್ನೊಬ್ಬ ನೃತ್ಯಗುರು ಸೌಜನ್ಯ ರೆಡ್ಡಿಯವರ ಶಿಷ್ಯೆ. ಜತೆಗೆ ರಾಷ್ಟ್ರೀಯ ನಾಟಕ ಶಾಲೆ

